# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

## ಸಿ.ಸಿ. ನಂ. 25/2025

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ನಿರೀಕ್ಷಕರು,
ಹೊನ್ನಾವರ ಪೊಲೀಸ್ ಠಾಣೆ

–ವಿರುದ್ಧ–

ಆರೋಪಿಃ ಮಹಮ್ಮದ್ ಸಾದಿಕ ಅಫ್ಜಲ್ ಖಾನ್
ವಯಸ್ಸುಃ 35 ವರ್ಷಗಳು,
ಉದ್ಯೋಗಃ ಆಟೋ ಚಾಲಕ
ಸಾಕೀನಃ ಕೃಷ್ಣಕೇರಿ, ನಗರಬಸ್ತಿಕೇರಿ, ಸರಳಗಿ, ಹೊನ್ನಾವರ

## ಆರೋಪಣೆ

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನೀವು ಮೇಲೆ ಈ ಕೆಳಕಂಡ ಆರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲನೇಯದಾಗಿ ದಿನಾಂಕಃ 28–12–2024 ರಂದು ಮಧ್ಯಾಹ್ನ 12.25 ರ ಸಮಯದಲ್ಲಿ ಆರೋಪಿಯಾದ ನೀವು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹೊನ್ನಾವರ ತಾಲೂಕು ಉಪ್ಪೋಣಿ ಊರಿನ ತೂಗುಸೇತುವೆ ಹತ್ತಿರ ಹಾಯ್ದಿರುವ ರಾಷ್ಟ್ರೀಯ ಹೆದ್ದಾರಿ–69 ರ ಮೇಲೆ ಆಟೋ ರಿಕ್ಷಾ ಸಂಖ್ಯೆಕೆಎ–47/ಎ–3826 ನೇದರಲ್ಲಿ ಪ್ರಯಾಣಿಕರಾದ ಚಾ.ಸಾ. 1 ರವರಾದ ಶ್ರೀಮತಿ ಅಫ್ರೀನಾಜ್ ಕೋಂ ಹಕಿಂಖಾನ್ ಹಾಗೂ ಅವರ ಮಗನಾದ ಅಬ್ದುಲ್ ರೆಹಮಾನ್ ಹಕ್ಕಿಂಖಾನ್ ರವರನ್ನು ಕರೆದುಕೊಂಡು ಉಪ್ಪೋಣಿ ಕಡೆಯಿಂದ ಸರಳಗಿ ಕಡೆಗೆ ರಾಷ್ಟ್ರೀಯ ಹೆದ್ದಾರಿ 69 ರಲ್ಲಿ ಅತಿವೇಗ ಅಥವಾ ನಿಷ್ಕಾಳಜಿಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆಮಾಡಿಕೊಂಡು ಹೋಗಿ ಉಪ್ಪೋಣಿ ತೂಗುಸೇತುವೆ ಹತ್ತಿರ ರಾಷ್ಟ್ರೀಯ ಹೆದ್ದಾರಿ 69 ರಲ್ಲಿ ಆಟೋ ರಿಕ್ಷಾಕ್ಕೆ ಅಡ್ಡವಾಗಿ ಒಂದು ಚಿಕ್ಕ ಮಗು ಬಂದಾಗ ಆರೋಪಿತರಾದ ನೀವು ಒಮ್ಮೆಲೆ ಬ್ರೇಕ್ ಹಾಕಿ ಆಟೋ ರಿಕ್ಷಾವನ್ನು ಪಲ್ಟಿ ಮಾಡಿ ಅಪಘಾತಪಡಿಸಿದ್ದರಿಂದ ಭಾರತೀಯ ನ್ಯಾಯ ಸಂಹಿತೆ ಕಲಂ 281 ರ ಪ್ರಕಾರ ಅಪರಾಧ ಎಸಗಿರುತ್ತಾರೆ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಮೇಲೆ ಹೇಳಿದ ರೀತಿ ಅಪಘಾತವಾನ್ನ ಉಂಟುಮಾಡಿದ್ದರಿಂದ, ಆಟೋ ರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದ

ಫಿರ್ಯಾದಿಯ ಮಗನಾದ ಅಬ್ದುಲ್ ರೆಹಮಾನ ಹಕ್ಕಿಂ ಖಾನ ರವರಿಗೆ ತಲೆಗೆ ಗಂಭೀರ ಗಾಯ ನೋವು ಹಾಗೂ ಚಾ.ಸಾ. 1 ರವರಾದ ಶ್ರೀಮತಿ ಅಫ್ರೀನಾಜ್ ಕೋಂ ಹಕಿಂಖಾನ್ ರವರಿಗೆ ಮೈ, ಕೈ ಹಾಗೂ ಕಾಲುಗಳಿಗೆ ಸಾದಾ ಗಾಯ ನೋವು ಉಂಟು ಮಾಡಿದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 125(ಎ) ರ ಪ್ರಕಾರ ಅಪರಾಧ ಎಸಗಿರುತ್ತಾರೆ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀವು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಫಿರ್ಯಾದಿಯ ಮಗನಾದ ಅಬ್ದುಲ್ ರೆಹಮಾನ ಹಕ್ಕಿಂ ಖಾನ ರವರಿಗೆ ಚಿಕಿತ್ಸೆಗಾಗಿ ಹೊನ್ನಾವರ ಸೇಂಟ್ ಇಗ್ನೇಷಿಯಸ್ ಆಸ್ಪತ್ರೆಗೆ ತಂದಾಗ ಆಸ್ಪತ್ರೆಯ ವೈದ್ಯರು ಮಧ್ಯಾಹ್ನ 01.05 ಗಂಟೆಗೆ ಈಗಾಗಲೇ ಮೃತಪಟ್ಟ ಬಗ್ಗೆ ತಿಳಿಸಿದ್ದು, ಆತನ ಮರಣವು ನಿಮ್ಮ ನಿರ್ಲಕ್ಷತನದಿಂದ ಉಂಟಾದ ಮಾನವ ಹತ್ಯೆಯಲ್ಲದ ಮರಣವಾದ್ದರಿಂದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 106(1)ರ ಪ್ರಕಾರ ಅಪರಾಧ ಎಸಗಿರುತ್ತಾರೆ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

4.ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಆಟೋ ರಿಕ್ಷಾವನ್ನು ನಗರಬಸ್ತಿಕೇರಿ ಮಂಡಲ ಹಾಗೂ ಅಲ್ಲಿಂದ 3 ಕಿ.ಮೀ ವ್ಯಾಪ್ತಿಯನ್ನು ಬಿಟ್ಟು ಆಟೋ ರಿಕ್ಷಾವನ್ನು ಬಾಡಿಗೆ ಚಲಾಯಿಸಿ ಸದರಿ ಆಟೋ ರಿಕ್ಷಾದ ಪರ್ಮಿಟ್‌ನ್ನು ಉಲ್ಲಂಘನೆ ಮಾಡಿದ್ದರಿಂದ ನೀವು ಮೋಟಾರ್ ವಾಹನ ಕಾಯಿದೆ ಕಲಂ 192(ಎ) ರಡಿ ಅಪರಾಧ ಎಸಗಿರುತ್ತಿ ಎನ್ನುವ ಆರೋಪಣೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ 1. ನೀವು ಸದ್ರಿ ಆರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ?

ಉತ್ತರಃ

ಪ್ರಶ್ನೆ 2. ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಷ್ಯ ಇದೆಯೇ?

ಉತ್ತರಃ

(**ಆರೋಪಣೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆತ ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.**)

sd/-

ದಿನಾಂಕಃ 20-06-2025

ಸ್ಥಳಃ ಹೊನ್ನಾವರ.

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**